"Azadi Ka Amrit Mahotsav"
INDIA@75

ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 24.12.2021

## ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

### ಕಳೆದ ಐದು ದಿನಗಳ ಹವಾಮಾನ ಸಾರಂಶ

| ನಿಯತಾಂಕಗಳು | 20.12.2021 | 21.12.2021 | 22.12.2021 | 23.12.2021 | 24.12.2021 |
|---|---|---|---|---|---|
| ಮಳೆ (ಮಿ ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 27.8 | 27.4 | 25.6 | 26.4 | 25.8 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 13.8 | 13.4 | 12.6 | 13.4 | 13.0 |
| ಮೋಡ ( ಪ್ರಮಾಣ) | 0 | 6 | 0 | 0 | 0 |
| ಆರ್ದ್ರತೆ 7.20 ಬೆ (ಶೇ) | 88 | 96 | 87 | 86 | 84 |
| ಆರ್ದ್ರತೆ 2.20 ಮ (ಶೇ) | 55 | 63 | 52 | 53 | -- |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 5.3 | 4.0 | 1.3 | 1.5 | 1.6 |
| ಗಾಳಿಯ ದಿಕ್ಕು ( ಡಿಗ್ರಿ) | 45 | 45 | 45 | 45 | 45 |

### ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)
(ದಿನಾಂಕ 25–12–2021 ರಿಂದ 29–12–2021 ವರೆಗೆ)

| ನಿಯತಾಂಕಗಳು | 25.12.2021 | 26.12.2021 | 27.12.2021 | 28.12.2021 | 29.12.2021 |
|---|---|---|---|---|---|
| ಮಳೆ (ಮಿ ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 29 | 29 | 28 | 27 | 27 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 16 | 16 | 16 | 16 | 16 |
| ಮೋಡ ( ಪ್ರಮಾಣ) | 2 | 2 | 2 | 2 | 2 |
| ಆರ್ದ್ರತೆ 7.20 ಬೆ (ಶೇ) | 78 | 78 | 79 | 79 | 80 |
| ಆರ್ದ್ರತೆ 2.20 ಮ (ಶೇ) | 35 | 35 | 36 | 37 | 37 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 2 | 3 | 3 | 4 | 1 |
| ಗಾಳಿಯ ದಿಕ್ಕು ( ಡಿಗ್ರಿ) | 111 | 108 | 112 | 112 | 112 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆಯಾಗುವ ಸಾದ್ಯತೆ ಕಡಿಮೆ. ದಿನದ ಗರಿಷ್ಠ ಉಷ್ಣಾಂಶ **27.0-29.0$^{o}$C** ಮತ್ತು ಕನಿಷ್ಠ **16.0$^{o}$C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **78-80** % ಇದ್ದು ಮಧ್ಯಾಹ್ನ **35-37** % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **1-4** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

- ಮೂಲ ಮಳೆಯ ಕಾಲವು ಡಿಸೆಂಬರ್ ತಿಂಗಳ 16 ರಿಂದ ಡಿಸೆಂಬರ್ ತಿಂಗಳ 28 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 4.1 ಮಿ.ಮೀ. ವರೆಗೆ ಮಳೆಯಾಗುತ್ತದೆ.

**ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ**

| **ಬೆಳೆಗಳು** | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| | | • ರೈತ ಬಾಂದವರು ಕಟಾವು ಮಾಡಿರುವ ಬೆಳೆಗಳನ್ನು ಸ್ವಚ್ಚ ಮಾಡಿ ಒಕ್ಕಣೆ ಮಾಡಿ, ಬಿಸಿಲಿನಲ್ಲಿ ಒಣಗಿಸಿ ಚೀಲದಲ್ಲಿ ಶೇಖರಿಸಿ.<br>• ಕಟಾವು ಮಾಡಿದ ಬಿತ್ತನೆ ಬೀಜಗಳನ್ನು ಸರಿಯಾಗಿ ಒಣಗಿಸಬೇಕು. ಅಂದರೆ ಏಕದಳ ದಾನ್ಯಗಳು ತೇವಾಂಶ ಶೇ. 11 ರಿಂದ 12, ದ್ವಿದಳದಾನ್ಯಗಳ ತೇವಾಂಶ ಶೇ.9, ಎಣ್ಣೆಕಾಳುಗಳು ಶೇ.8 ಮತ್ತು ತರಕಾರಿ ಬೀಜಗಳು ಶೇ 5 ರಿಂದ 6 ರಷ್ಟಿರಬೇಕು. ಇದರಿಂದ ಹೆಚ್ಚುದಿನ ಕೆಡದಂತೆ ಬೀಜಗಳನ್ನು ಸಂಸ್ಕರಣೆ ಮಾಡಬಹುದು ಜೊತೆಗೆ ಉಗ್ರಾಣ ಕೀಟದ ಬಾಧೆಯನ್ನು ಕಡಿಮೆಮಾಡಬಹುದು.<br>• ದ್ವಿದಳದಾನ್ಯಗಳನ್ನು ಸಂಸ್ಕರಣಾ ಕೀಟಗಳಿಂದ ರಕ್ಷಿಸಲು ಎಣ್ಣೆಯ ಲೇಪನಮಾಡಿ ಸಂಗ್ರಹಿಸಬೇಕು (ಔಡಲ, ಅಗಸಿ, ಹೊಂಗೆ ಅಥವಾ ಬೇವಿನ ಎಣ್ಣೆ) ಪ್ರತಿ ಕಿ.ಗ್ರಾಂ ಬೀಜಕ್ಕೆ 3 ರಿಂದ 5 ಮಿ.ಲೀ. ಎಣ್ಣೆಯನ್ನು ಉಪಯೋಗಿಸಬೇಕು. |
| ತೊಗರಿ | ಕಾಳು ಬಲಿಯುವ ಮತ್ತು ಕಟಾವು | 1. ಚೆನ್ನಾಗಿ ಬಲಿತಿರುವ ತೊಗರಿ ಕಾಳುಗಳನ್ನು ಕುಡುಗೋಲಿನಿಂದ ಕಟಾವು ಮಾಡಬಹುದು ಕಟಾವು ಮಾಡಿರುವ ಬೆಳೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಒಕ್ಕಣೆ ಮಾಡಿ ಗೋಣಿ ಚೀಲದಲ್ಲಿ ಶೇಖರಿಸಿ |
| ರಾಗಿ | ಕಟಾವು | 1. ಕಟಾವಿಗೆ ಬಂದಿರುವ ರಾಗಿ ತೆನೆಗಳನ್ನು ಕುಡುಗೋಲಿನಿಂದ ಕಟಾವು ಮಾಡಬಹುದು<br>2. ಗಿಡವು ನೆಲಕ್ಕೆ ಬಿದ್ದಿಲ್ಲವಾದಲ್ಲಿ ರಾಗಿ ಕಟಾವು ಮಾಡುವ ಯಂತ್ರದಿಂದ ಕಟಾವು ಮಾಡಬಹುದು<br>3. ಕಟಾವು ಮಾಡಿರುವ ಬೆಳೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಗೋಣಿ ಚೀಲದಲ್ಲಿ ಶೇಖರಿಸಿ |
| ಮೆಕ್ಕೆಜೋಳ | ಕಟಾವು | 1. ಕಟಾವು ಮಾಡಿರುವ ತೆನೆಯನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ |
| ಮಾವು | ಹೂವಿನ ಕುಡಿ ಚಿಗುರುವ ಮತ್ತು ಹೂವಿನ ಹಂತ | 1. ಕನಿಷ್ಠ ಉಷ್ಣಾಂಶವು 3–4 $^{o}C$ ಹಟಾತ್ ಕುಸಿತದಿಂದ ಮಾವಿನ ಹೂವಿನ ಮೇಲೆ ತುಂಬಾ ಪರಿಣಾಮ ಬಿದ್ದು ಹೂವುಗಳು ಉದುರುವುದು ಸರ್ವೇ ಸಾಮಾನ್ಯವಾಗಿದೆ. ಇದರ ಹತೋಟಿಗೆ ಪ್ಯಾಕ್ಲೋಬ್ಯುಟಜಾಲ್ ಅನ್ನು ಸಿಂಪಡಿಸಿ ಇದರಿಂದ ಎಲೆ ಚಿಗುರುವುದು ನಿಲ್ಲುತ್ತದೆ ಮತ್ತೆ ಹೊಸ ಹೂವುಗಳು ಬಿಡಲು ಪ್ರಾರಂಭವಾಗುತ್ತವೆ.<br>2. ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಚ್ಚಿದ ಕೂಡಲೇ ಜಿಗಿಹುಳು ಮತ್ತು ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ 4ಗ್ರಾಂ ಕಾರ್ಬರಿಲ್ (50 wp) ಅಥವಾ 0.3 ಮಿ.ಲೀ ಇಮಿಡಾಕ್ಲೋಪ್ರಿಡ್ 200.ಎಸ್.ಎಲ್ ಅಥವಾ 0.5 ಮಿ.ಲೀ ಲ್ಯಾಂಬ್ಡಾ ಸೈಯೋಲೋಥ್ರಿನ್ (5 ಇಸಿ)<br>3. ಜೊತೆಗೆ 3ಗ್ರಾಂ. ನೀರಿನಲ್ಲಿ ಕರಗುವ ಗಂಧಕ (ಸಲ್ ಟಾಫ್ 80wp) ಪ್ರತಿ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಿ.<br>4. ಜಿಗಿಹುಳುವಿನ ಹಾವಳಿ ತೀವ್ರವಾಗಿದ್ದಲ್ಲಿ ಅಝಾಡಿರೆಕ್ಟಿನ್ (10,000 ಪಿ.ಪಿ.ಎಮ್) 7 ಮಿ.ಲೀ/ಲೀ ನೀರಿನಲ್ಲಿ ಸಿಂಪಡಿಸಿ.<br>5. ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಚಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತುತೆಗೆಯಬೇಕು.<br>6. ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಚಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತುತೆಗೆಯಬೇಕು. |
| **ಪಶುಸಂಗೋಪನೆ** | | 1. ತಾಪಮಾನದಲ್ಲಿ ಹಠಾತ್ ಕುಸಿತದಿಂದ ಪ್ರಾಣಿಗಳನ್ನು ರಕ್ಷಿಸಲು ರಾತ್ರಿಯ ಸಮಯದಲ್ಲಿ ಮುಚ್ಚಿದ ಶೆಡ್ ಪ್ರದೇಶದಲ್ಲಿ ಇರಿಸಿ.<br>2. ಪ್ರಾಣಿಗಳ ಶೆಡ್‌ಗಳಲ್ಲಿನ ನೆಲ ಹಾಸು/ಹುಲ್ಲನ್ನು ಪ್ರತಿದಿನ ಬದಲಾಯಿಸಬೇಕು.<br>3. ಕೆಲವು ಪ್ರದೇಶಗಳಲ್ಲಿ ಚಳಿಗಾಲದ ತಿಂಗಳುಗಳಲ್ಲಿ ಉಂಟಾಗುವ ಕೊರತೆಯ ಅವಧಿಗೆ ಮೇವನ್ನು ಸಂಗ್ರಹಿಸಲು ಸರಿಯಾದ ಕಾಳಜಿ ವಹಿಸಬೇಕು, ಈ ಸಮಯದಲ್ಲಿ ದೀರ್ಘಕಾಲಿಕ ಹುಲ್ಲುಗಳನ್ನು ಕತ್ತರಿಸಬೇಕು. |
| **ಕೋಳಿ ಸಾಕಾಣಿಕಾ** | | 1. ಮೊಟ್ಟೆಯಿಂದ ಮರಿಗಳ ಬಂದ ನಂತರ ಮೊದಲನೇ ವಾರದಲ್ಲಿ ಶಾಖದ ಬುಟ್ಟಿಯ ಕೆಳಗೆ ಬಿಡಬೇಕು ಮತ್ತು ಶಾಖದ ಬುಟ್ಟಿಯ ಅಂಚಿನಲ್ಲಿ ನೆಲಕ್ಕೆ ಹರಡಿರುವ ಸತ್ತೆಯಿಂದ 8 ಸೆ.ಮೀ. ಮೇಲೆ $35^{0}$ ಸೆ. ಶಾಖ ಇರಬೇಕಾಗುತ್ತದೆ. ಅನಂತರ ವಾರಕ್ಕೆ $2^{0}$ ಸೆ. ನಂತೆ ಕಡಿಮೆ ಮಾಡಿ, ನಾಲ್ಕು ವಾರಗಳ ನಂತರ ಬಿಸಿ ಬುಟ್ಟಿಗಳನ್ನು ತೆಗೆಯಬೇಕು.<br>2. ಚಳಿಗಾಲವಿರುವುದರಿಂದ ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಉಷ್ಣಾಂಶದ ಸ್ಥಿರತೆ ಕಾಪಾಡಲು ವಿದ್ಯುತ್ ಬಲ್ಬ್ ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುತ್ತದೆ.<br>3. ಕೋಳಿ ಸಾಕಾಣಿಕಾ ಕೊಠಡಿಯಲ್ಲಿ ಕಿಟಕಿಯಲ್ಲಿ ಚಳಿಗಾಳಿಯು ಹೆಚ್ಚಾಗಿ ಬೀಸುವುದರಿಂದ ಪರದೆಯನ್ನು ಮುಚ್ಚಿ ಚಳಿಯಿಂದ ರಕ್ಷಿಸಬೇಕು. |
| **ರೇಷ್ಮೆ ಸಾಕಾಣಿಕೆ** | | 1. **ಸುಣ್ಣ ಕಟ್ಟು ರೋಗ:** ಈ ರೋಗವು ಸಾಮಾನ್ಯವಾಗಿ ಮಳೆಗಾಲ ಮತ್ತು ಚಳಿಗಾಲದಲ್ಲಿ ಕೆಲವು ಶಿಲೀಂಧ್ರಗಳ ಸೋಂಕಿನಿಂದ (ಬ್ಯುವೇರಿಯಾ ಬ್ಯಾಸಿಯಾನಾ) ಬರುತ್ತದೆ.<br>**2.** ರೋಗವನ್ನು ಯಶಸ್ವಿಯಾಗಿ ನಿಯಂತ್ರಿಸಬೇಕಾದರೆ ಉಷ್ಣಾಂಶ ಮತ್ತು ತೇವಾಂಶವನ್ನು ಶಿಫಾರಸ್ಸು ಮಾಡಿದ ರೀತಿಯಲ್ಲಿ ಕಾಪಾಡಬೇಕು. |

| | |
|---|---|
| | 3. ರೇಷ್ಮೆ ಸಾಕಾಣಿಕಾ ಘಟಕದಲ್ಲಿ ಕನಿಷ್ಠ ಉಷ್ಣಾಂಶವು $22^0$ ಸೆ. ಗಿಂತ ಕಡಿಮೆಯಾದಲ್ಲಿ ರೂಮ್ ಹೀಟರ್‌ಗಳ ಮುಖಾಂತರ ಸ್ಥಿರತೆಯನ್ನು ಕಾಪಾಡುವ್ವದು ಅವಶ್ಯಕ.<br>4. ಹಾಸಿಗೆಯನ್ನು ತೆಳುವಾಗಿಟ್ಟು ಹಳೆ ಹಾಸಿಗೆ ಒಣಗುವಂತೆ ಸುಣ್ಣವನ್ನು ಹಂತಕ್ಕೆ ತಕ್ಕಂತೆ ಸರಿ ಪ್ರಮಾಣದಲ್ಲಿ ಧೂಳೀಕರಿಸಿ ನೋಡಿಕೊಳ್ಳಬೇಕು.<br>5. ಬಲೆಯನ್ನು ಬಳಸಿ ಹಾಸಿಗೆಯನ್ನು ಸ್ವಚ್ಚಗೊಳಿಸಬೇಕು ಮತ್ತು ರೋಗಗ್ರಸ್ಥ ಹುಳುಗಳನ್ನು ಆಯ್ದು ಮಣ್ಣಿನಲ್ಲಿ ಹೂತು ಹಾಕಿ ನಾಶಪಡಿಸಬೇಕು. ಸಾಕಾಣಿಕೆ ಮನೆ ಮತ್ತು ಅದರ ಸುತ್ತಲೂ ಶೇ.5ರ ಬ್ಲೀಚಿಂಗ್ ಪುಡಿ ಮತ್ತು ಸುಣ್ಣದ ಮಿಶ್ರಣವನ್ನು (1:19) ಧೂಳೀಕರಿಸಬೇಕು ಹಾಗೂ ವೈಯಕ್ತಿಕ ಶುಭ್ರತೆಯನ್ನು ಕಾಪಾಡಬೇಕು.<br>6. ಕಾಲಕಾಲಕ್ಕೆ ಹಾಸಿಗೆ ಸೋಂಕು ನಿವಾರಕಗಳಾದ ಸುರಕ್ಷ, ವಿಜೇತ, ಅಂಕುಶ್, ಸಂರಕ್ಷಕ ಮುಂತಾದ ಔಷಧಿಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಧೂಳೀಕರಿಸುತ್ತಿರಬೇಕು ಮತ್ತು ರೋಗ ಕಾಣಿಸಿಕೊಂಡಾಗ ಹತೋಟಿ ಬರುವವರೆಗೂ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಸೋಂಕು ನಿವಾರಕಗಳನ್ನು ಬಳಸಬೇಕು. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಫ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.